ಸಂಪೂರ್ಣಾನಂದ ಬಳ್ಕೂರು

# ಇಂಬ ಮತ್ತು ಅಧ್ಯಾತ್ಮ

ನೀವು ಖಂಡಿತ ಇಂಬ ನೋಡಿದವರು, ತಿಂದವರು ಎಂಬ ದೃಢವಾದ(ಮೂಢ)ನಂಬಿಕೆ ನನ್ನದು. ಇಂಬ ಹಲಸಿನ ಹಣ್ಣಿನಲ್ಲಿ ಒಂದು ಜಾತಿ. ಹಲಸಿನ ಹಣ್ಣಿನ ಇಂಬ ಮತ್ತು ಬಕ್ಕೆ ಎಂಬ ಎರಡು ಪ್ರಧಾನ ಜಾತಿಗಳಲ್ಲಿ ಅರೆ ಇಂಬ, ಚಂದ್ರ ಬಕ್ಕೆ ಮೊದಲಾದ ಉಪಜಾತಿಗಳೂ ಇವೆ. ಇಂಬ ಎಂಬುದು ತೊಳೆಗಳನ್ನು ಬಿಡಿಸಲು ಕಷ್ಟವಾಗುವ ಜಾತಿ. ತುಳುನಾಡಿನವರು ಇದನ್ನು ತುಳುವ ಎಂದು ಕರೆಯುತ್ತಾರೆ. ಹಾಗೆ ಅಮೆರಿಕಾದವರು ಅಮೆರಿಕನ್ ಅಂತಲೂ ಪೆರುವರು ಪೆರುವನ್ ಅಂತಲೂ ಕರೆದಾರು. ದಕ್ಷಿಣ ಅಮೆರಿಕಾ ಖಂಡದಲ್ಲಿ ಹಲಸು ಸಮೃದ್ಧವಾಗಿ ಬೆಳೆಯುತ್ತದಾದರೂ ಇದರ ಮೂಲ ಅಲ್ಲಿಯೇ ಎಂಬುದು ನಿಖರವಾಗಿ ತಿಳಿದಿಲ್ಲ. ತೆಂಗಿನ ಕಾಯಿಯ ಮೂಲ ಅಲ್ಲೇ ಎಂದು ನಿಖರವಾಗಿ ಡಾ. ಬಿ.ಜಿ.ಎಲ್. ಸ್ವಾಮಿಯವರು ಹೇಳಿದ್ದರೂ ನಮ್ಮೂರ ಹೊಸ ತಲೆಮಾರಿಗೆ ಅದನ್ನು ತಿಳಿಸುವುದು ಸಾಧ್ಯವೇ ಇಲ್ಲ ಬಿಡಿ. ಏಕೆಂದರೆ ನಾಗಮಂಡಲ, ಅಷ್ಟಬಂಧಗಳೊಳಗೆ ಭಾವನಾತ್ಮಕವಾಗಿ ಬೆಸೆದುಕೊಂಡ ತೆಂಗನ್ನು ಅದು ನಮ್ಮೂರಲ್ಲಿ 800 ವರ್ಷಗಳಿಗಿಂತ ಮೊದಲು ಇರಲೇ ಇಲ್ಲ ಎಂದರೆ ಅದು ಧಾರ್ಮಿಕ, ಆಧ್ಯಾತ್ಮಿಕ, ಭಾವನಾತ್ಮಕ, ಕೋಮು ಸಂವೇದನೆಗಳನ್ನು ಕೆರಳಿಸುವ ಮಾತಾಗದಿದ್ದೀತೆ?

ಅದಿರಲಿ, ಪೆರುವಿನಲ್ಲಿ ಸಮೃದ್ಧವಾಗಿ ಬೆಳೆಯುವ ಹಲಸು ನಮ್ಮೂರಲ್ಲೂ ಸಕತ್ತಾಗಿಯೇ ಬೆಳೆಯುತ್ತ ಇದರ ನಿಕಟ ಪ್ರತಿಸ್ಪರ್ಧಿಯಾದ ಮಾವಿಗಿಂತ ಹೆಚ್ಚು ಗೌರವದ ಸ್ಥಾನ ಪಡೆದಿದೆ. ನಮ್ಮ ದೇಸೀ ಮೂಲದ್ದೇ ಆದ ಮಾವು 'ಇಂಡಿಕಾ ಮ್ಯಾಂಗೋಫರ್' ಎಂಬ ಬಿರುದು ಪಡೆದು ಇಂಡಿಯಾದ್ದು ಅಂತ ಜಗಜ್ಜಾಹೀರಾಗಿದ್ದರೂ ನಮ್ಮೂರೊಳಗೆ ಅದಕ್ಕೆ ತುಸು ಮೈಲಿಗೆಯ ಸ್ಥಾನವೇ, ಹೆಣ ಸುಡುವುದಕ್ಕೆ ಅದೇ ಬೇಕಾದ್ದರಿಂದಲೋ ಏನೋ!

ಇನ್ನು ಆಧ್ಯಾತ್ಮದ ವಿಚಾರ. ಅಧ್ಯಾತ್ಮ, ಧಾರ್ಮಿಕ ಮೊದಲಾದ ಶಬ್ದಗಳು ನಮ್ಮೂರಿಗೆ ಬಂದುದು ತೀರ ಇತ್ತೀಚೆಗೆ. ಡಿಕ್ಲರೇಶನ್ ಕಾನೂನು ಬಂದು ಉಳುವವನೆ ಹೊಲದೊಡೆಯ ಆದ ಮೇಲೆ. ಸಾಗೂವಳಿ ಗದ್ದೆ ಇಲ್ಲ ಅಂತ ಆಗಿ ಮಕ್ಕಳು ಬೆಂಗಳೂರಿಗೋ ಮುಂಬೈಗೋ ಹೋಟೆಲು